# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. 36/2014**

**ದೋ.ಸಾ. : 57 ಪ್ರಾ.ಸಾ. :44**

| | | |
|---|---|---|
| ಸಾಕ್ಷಿಯ ಹೆಸರು | : | ಅರುಣ್ ಕುಮಾರ್ ಕೊಳೂರ |
| ತಂದೆಯ ಹೆಸರು | : | ಘೋರಣ್ಣ ಕೊಳೂರು |
| ವಯಸ್ಸು | : | 61 ವರ್ಷ |
| ಕೆಲಸ | : | ನಿವೃತ್ತ ಡಿವೈ.ಎಸ್.ಪಿ., |
| ವಾಸ | : | ದಾವಣಗೆರೆ |

**ದಿನಾಂಕಃ 12-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಸೆಪ್ಟೆಂಬರ್ 2013 ರಿಂದ ಜುಲೈ 2015 ರವರೆಗೆ ನಾನು ಕದ್ರಾ ವೃತ್ತದಲ್ಲಿ ಪೊಲೀಸ್ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.14-02-2014 ರಂದು ನಾನು ಕಾರವಾರದಲ್ಲಿ ನಡೆಯುತ್ತಿದ್ದ ಸೇನಾ ಭರ್ತಿ ರ್‍ಯಾಲಿಯ ಬಂದೋಬಸ್ತ್ ಕರ್ತವ್ಯದ ಮೇಲೆ ಇದ್ದಾಗ, ರಾತ್ರಿ ಸುಮಾರು 11.45 ಗಂಟೆಗೆ ಕದ್ರಾ ಠಾಣೆಯ ಪಿ.ಎಸ್.ಐ./ಚಾಸಾ-56 ರವರು ದೂರವಾಣಿ ಕರೆ ಮಾಡಿ, "ಕದ್ರಾದ ರಾಜೀವ್ ನಗರದಲ್ಲಿ ವೇಲು ಇಲ್ಲನ್ ಗುಡಿ ಯವರ ಮನೆಯಲ್ಲಿ ಅವರ ಮಗಳಾದ ಅಶ್ವಿನಿಯ ಕತ್ತು ಕೊಯ್ದು ಯಾರೋ ಕೊಲೆ ಮಾಡಿರುತ್ತಾರೆ ಹಾಗೂ ಆತನ ಹೆಂಡತಿಯಾದ ಜಾನಕಿಯ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿರುತ್ತಾರೆ, ಆದ್ದರಿಂದ ಅವಳನ್ನು ಆಸ್ಪತ್ರೆಗೆ ಕಳುಹಿಸಿರುತ್ತೇವೆ ಮತ್ತು ಅವರ ಮನೆಯಲ್ಲಿ ವೇಲು ಹಾಗೂ ಆತನ ಮಗ ಸತ್ಯನಾರಾಯಣ ಮೂರ್ತಿಯು ಕಾಣುತ್ತಿಲ್ಲವಾದ್ದರಿಂದ, ಅವರನ್ನು ಹುಡುಕುತ್ತಿದ್ದೇವೆ" ಎಂದು ತಿಳಿಸಿರುತ್ತಾರೆ. ಸದರಿ ಮಾಹಿತಿಯನ್ನು ನಾನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿ, ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದಾಗ ವೇಲುವಿನ ಮನೆಯಲ್ಲಿ ವಿದ್ಯುತ್ ದೀಪದ ಬೆಳಕು ಇರಲಿಲ್ಲ ಹಾಗೂ ಸದರಿ ಮನೆಯ ವಿದ್ಯುತ್ ಸಂಪರ್ಕದ ವಯರುಗಳನ್ನು ಕತ್ತರಿಸಲಾಗಿತ್ತು, ಆದರೆ ಮನೆಯ ಹಾಲ್ ನಲ್ಲಿ ದೇವರಿಗೆ ಹಚ್ಚಿದ ದೀಪದ

ಬೆಳಕಿತ್ತು ಹಾಗೂ ಹಾಲ್ ನಲ್ಲಿ ಅಶ್ವಿನಿಯ ಶವ ಬಿದ್ದಿದ್ದು, ಮನೆಯ ಹಾಲ್ ಹಾಗೂ ಬೆಡ್ ರೂಮಿನಲ್ಲಿ ರಕ್ತ ಚೆಲ್ಲಿತ್ತು. ಅದಾಗಲೇ ಚಾಸಾ-56 ರವರು ಸ್ಥಳ ಸಂರಕ್ಷಣೆಗಾಗಿ ಸಿಬ್ಬಂದಿಗಳನ್ನು ನೇಮಿಸಿದ್ದರು.

2. ವೇಲು ಹಾಗೂ ಆತನ ಮಗ ಸತ್ಯನಾರಾಯಣ ಮೂರ್ತಿಯನ್ನು ಪೊಲೀಸ್ ಸಿಬ್ಬಂದಿಯಾದ ನಾವು ಹಾಗೂ ಊರಿನ ಜನರು ಸೇರಿ ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಅವರಿಬ್ಬರಿಗಾಗಿ ಹುಡುಕಾಟ ನಡೆಸಿದ್ದು, ರಾತ್ರಿ ಸುಮಾರು 1.00 ಗಂಟೆಯ ಸಮಯದಲ್ಲಿ ಕೊಡಸಳ್ಳಿ ಡ್ಯಾಮ್ ಗೆ ಹೋಗುವ ರಸ್ತೆಯಿಂದ ಅರಣ್ಯಕ್ಕೆ ಹೋಗುವ ಕಾಲುದಾರಿಯಲ್ಲಿ ವೇಲು ಹಾಗೂ ಆತನ ಮಗ ಸತ್ಯನಾರಾಯಣ ಮೂರ್ತಿಯ ಶವಗಳು ಪತ್ತೆಯಾಗಿದ್ದು, ಸತ್ಯನಾರಾಯಣ ಮೂರ್ತಿಯ ಕುತ್ತಿಗೆಯ ಎಡಭಾಗದಲ್ಲಿ ಹರಿತವಾದ ಆಯುಧದಿಂದ ಕತ್ತರಿಸಲಾಗಿದ್ದು, ಆತನು ಮೃತಪಟ್ಟಿರುತ್ತಾನೆ. ಅದೇ ಕಾಲುದಾರಿಯಲ್ಲಿ ಸ್ವಲ್ಪ ಮುಂದೆ ಹೋದಾಗ, ಅಲ್ಲಿ ವೇಲುವಿನ ಶವವು ಬಿದ್ದಿದ್ದು, ಆತನ ತಲೆ, ಕುತ್ತಿಗೆ, ಹಣೆ, ಎಡಗೈಯ ಬೆರಳಿಗೆ ಮತ್ತು ಬಲಕಿವಿಯ ಭಾಗಗಳಲ್ಲಿ ಹರಿತವಾದ ಆಯುಧದಿಂದ ಕತ್ತರಿಸಲಾಗಿದ್ದು, ಆತನೂ ಸಹ ಮೃತಪಟ್ಟಿದ್ದು, ಆತನ ಶವದ ಪಕ್ಕದಲ್ಲಿ ಆತನು ಉಪಯೋಗಿಸುತ್ತಿದ್ದ ಎರಡು ಊರುಗೋಲುಗಳೂ ಸಹ ಬಿದ್ದಿರುತ್ತವೆ. ಆದಿನ ರಾತ್ರಿಯಾಗಿದ್ದರಿಂದ, ಶವಗಳ ಸಂರಕ್ಷಣೆಗಾಗಿ ಸಿಬ್ಬಂದಿಯನ್ನು ನೇಮಿಸಿರುತ್ತೇನೆ.

3. ಸದರಿ ಘಟನೆಗೆ ಸಂಬಂಧಿಸಿದಂತೆ, ಚಾಸಾ-56 ರವರು ಕದ್ರಾ ಠಾಣಾ ಗುನ್ನಾ ಸಂಖ್ಯೆ 5/2014 ರಲ್ಲಿ ಪ್ರಕರಣ ದಾಖಲಿಸಿ, ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ನನಗೆ ವಹಿಸಿಕೊಟ್ಟಿರುತ್ತಾರೆ. ಅದೇ ದಿನ ಅಂದರೆ ದಿ.15-02-2014 ರಂದು ಆರೋಪಿಯ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ. ಆನಂತರ ಕಾರವಾರ ಪೊಲೀಸ್ ಉಪಾಧೀಕ್ಷಕರಿಗೆ ಘಟನಾ ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರನ್ನು ಕಳುಹಿಸುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆಯ ಮೇರೆಗೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಘಟನಾ ಸ್ಥಳಕ್ಕೆ ಬಂದು ಪರಿಶೀಲಿಸಿರುತ್ತಾರೆ. ಅದೇ ದಿನ ಬೆಳಿಗ್ಗೆ ಘಟನಾ ಸ್ಥಳಗಳ ಮಹಜರು ನಡೆಸಲು ಚಾಸಾ-2, 3 ಮತ್ತು 4 ರವರನ್ನು ಪಂಚರನ್ನಾಗಿ ಕರೆಸಿಕೊಂಡಿರುತ್ತೇನೆ. ಮೊದಲಿಗೆ ರಾಜೀವನಗರದ ವೇಲುರವರ ಮನೆಯ ಬಳಿ ಪಂಚನಾಮೆ ಪ್ರಾರಂಭಿಸಿದ್ದು, ಸ್ಥಳದಲ್ಲಿ ಹಾಜರಿದ್ದ ಚಾಸಾ-1 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ಸದರಿ ಮನೆಯು ಚರೆಕಲ್ಲಿನಿಂದ ಕಟ್ಟಿದ

ಮನೆಯಾಗಿದ್ದು, ಶೀಟ್ ಮೇಲ್ಚಾವಣಿಯನ್ನು ಹೊಂದಿರುತ್ತದೆ, ಸದರಿ ಮನೆಯು ಪೂರ್ವಾಭಿಮುಖವಾಗಿದ್ದು, ಮನೆಯ ಹೊರಗೆ ವಿದ್ಯುತ್ ಸಂಪರ್ಕದ ವಯರನ್ನು ಕತ್ತರಿಸಲಾಗಿತ್ತು, ಸದರಿ ಮನೆಯಲ್ಲಿ ನಾಲ್ಕು ಕೋಣೆಗಳಿದ್ದು, ಮನೆಯ ಹಾಲ್ ಗೆ ಪ್ರವೇಶಿಸುವ ಮೊದಲು ಎಡಭಾಗದಲ್ಲಿ ಒಂದು ಕೋಣೆ ಇರುತ್ತದೆ, ಸದರಿ ಕೋಣೆಯಲ್ಲಿ ವಾಹನಗಳಿಗೆ ಗಾಳಿ ತುಂಬುವ ಏರ್ ಕಂಪ್ರೆಷರ್ ಮಿಷನ್ ಇರುತ್ತದೆ, ಸದರಿ ಕೋಣೆಯ ಹೊರಗೆ ಮಹಾಮಾಯಿ ಟಯರ್ ವರ್ಕ್ಸ್ ಎಂದು ಬರೆಯಲಾಗಿತ್ತು, ಮನೆಯ ಹಾಲ್ ಪ್ರವೇಶಿಸುತ್ತಿದ್ದಂತೆ, ಉತ್ತರ ಬದಿಯ ಗೋಡೆಯ ಕಡೆಗೆ ಅಶ್ವಿನಿಯ ಶವ ಬಿದ್ದಿತ್ತು, ಆಕೆಯ ಕುತ್ತಿಗೆಯ ಎಡ ಭಾಗದಲ್ಲಿ ಹರಿತವಾದ ಆಯುಧದಿಂದ ಕತ್ತರಿಸಿದ ಗಾಯವಿದ್ದು, ನೆಲದ ಮೇಲೆ ರಕ್ತ ಹರಡಿಕೊಂಡಿತ್ತು, ಹಾಲ್ ನ ದಕ್ಷಿಣ ದಿಕ್ಕಿಗೆ ಇರುವ ಬೆಡ್ ರೂಮಿನ ಬಾಗಿಲ ಹತ್ತಿರ ಜಾನಕಿಯ ತುಂಡಾದ ಕೈ ಬಿದ್ದಿದ್ದ ಸ್ಥಳ ಹಾಗೂ ಆಕೆ ಕುಳಿತುಕೊಂಡಿದ್ದ ಸ್ಥಳ ಎಂದು ತೋರಿಸಿರುತ್ತಾರೆ, ಅಲ್ಲಿಯೂ ಸಹ ನೆಲದ ಮೇಲೆ ರಕ್ತ ಹರಡಿಕೊಂಡಿದ್ದು, ರಕ್ತವು ಒಣಗಿ ಕಪ್ಪಾಗಿತ್ತು, ರಕ್ತ ಹತ್ತಿದ ಪಾದದ ಗುರುತು ಕಂಡುಬಂದಿತ್ತು, ಅಶ್ವಿನಿಯ ಮೈಮೇಲೆ ಒಂದು ಹಳದಿ, ಬಿಳಿ, ಹಸಿರು, ನೀಲಿ ಬಣ್ಣದ ಹೂವಿನ ಡಿಸೈನ್ ಉಳ್ಳ ಕೆಂಪು ಬಣ್ಣದ ರೆಡಿಮೇಡ್ ಫ್ರಾಕ್, ಹಸಿರು ಬಣ್ಣದ ಒಳ ಫ್ರಾಕ್, ಹಳದಿ, ನೀಲಿ, ಕೇಸರಿ, ಬಿಳಿ ಬಣ್ಣದ ಡಿಸೈನ್‌ವುಳ್ಳ ಕಪ್ಪು ಬಣ್ಣದ ಚಡ್ಡಿಯಿದ್ದು, ಅವುಗಳಿಗೆ ರಕ್ತ ತಾಗಿತ್ತು. ಎಫ್.ಎಸ್.ಎಲ್. ಪರೀಕ್ಷೆಯ ಸಲುವಾಗಿ ಅಶ್ವಿನಿಯ ಶವ ಬಿದ್ದ ಸ್ಥಳದ ರಕ್ತ ತಾಗಿದ ಸಿಮೆಂಟ್ ಚೂರನ್ನು ಹಾಗೂ ರಕ್ತ ತಾಗದ ಸಿಮೆಂಟ್ ಚೂರನ್ನು ಪ್ರತ್ಯೇಕವಾಗಿ ಪೇಪರಿನಲ್ಲಿ ಸಂಗ್ರಹಿಸಿ, ಅದನ್ನು ಖಾಕಿ ಬಣ್ಣದ ಲಕೋಟೆಯಲ್ಲಿ ಹಾಕಿ, ಸೀಲ್ ಮಾಡಿ, 'M' ಅಕ್ಷರದ ಮೊಹರನ್ನು ಮಾಡಿ, ಸದರಿ ಲಕೋಟೆಗೆ ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅದರ ಮೇಲೆ 1A1, 1A2 ಎಂದು ಗುರುತಿಸಿ ಜಪ್ತುಪಡಿಸಿಕೊಂಡಿರುತ್ತೇನೆ, ನಂತರ ಜಾನಕಿಯ ಕೈ ತುಂಡಾಗಿದ್ದ ಸ್ಥಳವಾದ ಬೆಡ್ ರೂಮಿನ ರಕ್ತ ಹರಡಿದ ಸ್ಥಳದಲ್ಲಿ ಎಫ್.ಎಸ್.ಎಲ್. ಪರೀಕ್ಷೆಯ ಸಲುವಾಗಿ ರಕ್ತ ತಾಗಿದ ಸಿಮೆಂಟ್ ಚೂರನ್ನು ಹಾಗೂ ರಕ್ತ ತಾಗದ ಸಿಮೆಂಟ್ ಚೂರನ್ನು ಪ್ರತ್ಯೇಕವಾಗಿ ಪೇಪರಿನಲ್ಲಿ ಸಂಗ್ರಹಿಸಿ, ಅದನ್ನು ಖಾಕಿ ಬಣ್ಣದ ಲಕೋಟೆಯಲ್ಲಿ ಹಾಕಿ, ಸೀಲ್ ಮಾಡಿ, 'M' ಅಕ್ಷರದ ಮೊಹರನ್ನು ಮಾಡಿ, ಸದರಿ ಲಕೋಟೆಗೆ ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅದರ ಮೇಲೆ 1A3, 1A4 ಎಂದು ಗುರುತಿಸಿ ಜಪ್ತುಪಡಿಸಿಕೊಂಡಿರುತ್ತೇನೆ, ಸದರಿ ಕೋಣೆಯಲ್ಲಿದ್ದ ರಕ್ತ ಹತ್ತಿದ ಪಾದದ ಗುರುತನ್ನು ಅಳತೆ ಮಾಡಿ ನೋಡಿದಾಗ, 9 ಇಂಚು ಉದ್ದ ಇರುವುದು ಕಂಡುಬಂದಿರುತ್ತದೆ. ಸದರಿ ಬೆಡ್

ರೂಮಿನಲ್ಲಿ ಒಂದು ಕಬ್ಬಿಣದ ಗೋದ್ರೇಜ್ ಕಪಾಟು, ಒಂದು ಮಂಚ ಹಾಗೂ ಇತರೇ ವಸ್ತುಗಳು ಇದ್ದವು ಹಾಗೂ ಹಾಲ್ ನ ಪಶ್ಚಿಮ ದಿಕ್ಕಿನಲ್ಲಿ ದೇವರ ಮನೆ, ದಕ್ಷಿಣ ದಿಕ್ಕಿಗೆ ಅಡುಗೆ ಮನೆಯಿದ್ದು ಪರಿಶೀಲಿಸಲಾಗಿ, ಅನ್ನ ಮಾಡಿದ ಒಂದು ಪಾತ್ರೆ ಹಾಗೂ ಊಟ ಬಡಿಸಿಕೊಂಡು ಒಂದು ತಾಟು ಇತ್ತು, ಮನೆಯ ವಿದ್ಯುತ್ ಸ್ವಿಚ್ ಬಟನ್ ಗಳು ಆನ್ ಇದ್ದು, ವಿದ್ಯುತ್ ಸಂಪರ್ಕವು ಕತ್ತರಿಸಲಾದ ಕಾರಣ, ವಿದ್ಯುತ್ ಬೆಳಕು ಇರಲಿಲ್ಲ. ಪಂಚನಾಮೆಯನ್ನು ಬೆಳಿಗ್ಗೆ 7.35 ಗಂಟೆಯಿಂದ 8.35 ಗಂಟೆಯವರೆಗೆ ಮಾಡಿರುತ್ತೇನೆ. ಆ ಸಮಯದಲ್ಲಿ ನಿಪಿ–3 ಮತ್ತು 4 ರಂತೆ, ಹಾಗೂ ನಿಪಿ–8 ರಿಂದ 13 ಮತ್ತು 16 ರಂತೆ ಫೋಟೊಗಳನ್ನು ತೆಗೆಸಿರುತ್ತೇನೆ. ಸದರಿ ಮನೆಯಲ್ಲಿ ಜಪ್ತುಪಡಿಸಿಕೊಂಡ ರಕ್ತ ತಾಗಿದ ಸಿಮೆಂಟ್ ಚೂರು ಹಾಗೂ ರಕ್ತ ತಾಗದೇ ಇರುವ ಸಿಮೆಂಟ್ ಚೂರುಗಳನ್ನು ಈಗಾಗಲೇ ಎಂ.ಓ–1 ರಿಂದ 4 ಎಂದು ಗುರುತಿಸಲಾಗಿದ್ದು, ಅವುಗಳ ಮೇಲೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–1(ಸಿ), ಎಂ.ಓ–2(ಸಿ), ಎಂ.ಓ–3(ಸಿ) ಮತ್ತು ಎಂ.ಓ–4(ಸಿ) ಎಂದು ಗುರುತಿಸಲಾಯಿತು.

4. ಆನಂತರ ವೇಲು ಹಾಗೂ ಆತನ ಮಗ ಸತ್ಯನಾರಾಯಣ ಮೂರ್ತಿಯ ಶವ ಬಿದ್ದ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು, ಮೊದಲಿಗೆ ಸತ್ಯನಾರಾಯಣ ಮೂರ್ತಿಯ ಶವ ಬಿದ್ದ ಸ್ಥಳದಲ್ಲಿ ಪರಿಶೀಲನೆ ಮಾಡಿದಾಗ, ಮೃತನ ಮೈಮೇಲೆ ಒಂದು ನೀಲಿ ಬಣ್ಣದ ಕಾಟನ್ ಚಡ್ಡಿ, ನೇರಳೆ ಬಣ್ಣದ ಕಾಟನ್ ಶರ್ಟ್ ಇದ್ದವು, ಮೃತನ ಕುತ್ತಿಗೆಯ ಎಡಭಾಗದಲ್ಲಿ ಹರಿತವಾದ ಆಯುಧದಿಂದ ಕತ್ತರಿಸಿದ ಗಾಯವಾಗಿದ್ದು, ಸುತ್ತಮುತ್ತಲಿನ ಗಿಡ ಹಾಗೂ ನೆಲದ ಮೇಲೆ ರಕ್ತ ಚಿಮ್ಮಿ ಒಣಗಿದ್ದು ಕಂಡುಬಂದಿರುತ್ತದೆ, ಎಫ್.ಎಸ್.ಎಲ್ ಪರೀಕ್ಷೆಗಾಗಿ ಶವ ಬಿದ್ದ ಸ್ಥಳದಲ್ಲಿ ರಕ್ತ ಚಿಮ್ಮಿದ ಎಲೆಗಳು ಮತ್ತು ರಕ್ತವಾಗಿಲ್ಲದ ಎಲೆಗಳನ್ನು ಪ್ರತ್ಯೇಕ ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಜಪ್ತುಪಡಿಸಿಕೊಂಡು ಬಿಳಿ ಬಟ್ಟೆಯಿಂದ ಕಟ್ಟಿ, ಸೀಲು ಮಾಡಿ, 'M' ಅಕ್ಷರದ ಮೊಹರು ಮಾಡಿ, ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅವುಗಳಿಗೆ 1A5 ಮತ್ತು 1A6 ಎಂದು ಗುರುತಿಸಿರುತ್ತೇನೆ. ಅದೇ ರೀತಿ ಶವ ಬಿದ್ದ ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಪ್ರತ್ಯೇಕವಾಗಿ ಒಂದು ಬಿಳಿ ಪೇಪರಿನಲ್ಲಿ ಸಂಗ್ರಹಿಸಿ, ಅವುಗಳನ್ನು ಖಾಕಿ ಬಣ್ಣದ ಲಕೋಟೆಯಲ್ಲಿ ಹಾಕಿ, ಸೀಲು ಮಾಡಿ, 'M' ಅಕ್ಷರದ ಮೊಹರು ಮಾಡಿ, ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅವುಗಳಿಗೆ 1A7 ಮತ್ತು 1A8 ಎಂದು ಗುರುತಿಸಿರುತ್ತೇನೆ. ಸದರಿ ಸ್ಥಳದಲ್ಲಿ ಜಪ್ತುಪಡಿಸಿಕೊಂಡ ರಕ್ತ ತಾಗಿದ ಎಲೆ ಹಾಗೂ ರಕ್ತ ತಾಗದೇ ಇರುವ ಎಲೆಗಳನ್ನು ಈಗಾಗಲೇ ಎಂ.ಓ–5 ಮತ್ತು 6 ಎಂದು, ಅದಕ್ಕೆ ಅಂಟಿಸಿರುವ

ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–5(ಸಿ) ಮತ್ತು ಎಂ.ಓ–6(ಸಿ) ಎಂದು ಗುರುತಿಸಲಾಯಿತು. ಅದೇ ರೀತಿ, ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಈಗಾಗಲೇ ಎಂ.ಓ–7 ಮತ್ತು 8 ಎಂದು ಗುರುತಿಸಲಾಗಿದ್ದು, ಅದಕ್ಕೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–7(ಸಿ) ಮತ್ತು ಎಂ.ಓ–8(ಸಿ) ಎಂದು ಗುರುತಿಸಲಾಯಿತು.

5. ಸದರಿ ಸ್ಥಳದಿಂದ ಸುಮಾರು 15 ಅಡಿ ದೂರದಲ್ಲಿ ಉತ್ತರ ದಿಕ್ಕಿನ ಕಾಲುದಾರಿಯ ಪೂರ್ವದ ಅಂಚಿನಲ್ಲಿ ವೇಲುವಿನ ಶವ ಬಿದ್ದಿದ್ದು, ಅದನ್ನು ಪರಿಶೀಲಿಸಲಾಗಿ, ಆತನ ಮೈಮೇಲೆ ಕಂದು ಮತ್ತು ಬಿಳಿ ಬಣ್ಣದ ಗೆರೆಗಳಿರುವ ಪೂರ್ಣ ತೋಳಿನ ಶರ್ಟ್, ಹಳದಿ ಬಣ್ಣದ ಬಾರ್ಡರ್ ಇರುವ ಬಿಳಿ ಬಣ್ಣದ ಲುಂಗಿ ಇದ್ದು, ಅವುಗಳಿಗೆ ರಕ್ತ ತಾಗಿತ್ತು, ಆತನ ತಲೆ, ಕುತ್ತಿಗೆ, ಕೈಯ ಮೇಲೆ ಹರಿತವಾದ ಆಯುಧದಿಂದ ಕತ್ತರಿಸಲಾಗಿತ್ತು, ಶವದ ಪಕ್ಕದಲ್ಲಿ ಆತನ ಎರಡು ಊರುಗೋಲುಗಳೂ ಸಹ ಬಿದ್ದಿದ್ದವು, ಸುತ್ತಮುತ್ತಲಿನ ಗಿಡಗಳ ಮೇಲೆ ಹಾಗೂ ನೆಲದ ಮೇಲೆ ರಕ್ತ ಚಿಮ್ಮಿ ಒಣಗಿದ್ದು ಕಂಡುಬಂದಿರುತ್ತದೆ, ಎಫ್.ಎಸ್.ಎಲ್. ಪರೀಕ್ಷೆಗಾಗಿ ವೇಲುವಿನ ಶವ ಬಿದ್ದ ಸ್ಥಳದಲ್ಲಿ ರಕ್ತ ಚಿಮ್ಮಿದ ಎಲೆಗಳು ಮತ್ತು ರಕ್ತವಾಗಿಲ್ಲದ ಎಲೆಗಳನ್ನು ಪ್ರತ್ಯೇಕ ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಜಪ್ತುಪಡಿಸಿಕೊಂಡು, ಬಿಳಿ ಬಟ್ಟೆಯಿಂದ ಕಟ್ಟಿ, ಸೀಲು ಮಾಡಿ, 'M' ಅಕ್ಷರದ ಮೊಹರು ಮಾಡಿ, ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅವುಗಳಿಗೆ 1A9 ಮತ್ತು 1A10 ಎಂದು ಗುರುತಿಸಿರುತ್ತೇನೆ. ಅದೇ ರೀತಿ ಶವ ಬಿದ್ದ ಸ್ಥಳದಲ್ಲಿ ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಪ್ರತ್ಯೇಕವಾಗಿ ಒಂದು ಬಿಳಿ ಪೇಪರಿನಲ್ಲಿ ಸಂಗ್ರಹಿಸಿ, ಅವುಗಳನ್ನು ಖಾಕಿ ಬಣ್ಣದ ಲಕೋಟೆಯಲ್ಲಿ ಹಾಕಿ, ಸೀಲು ಮಾಡಿ, 'M' ಅಕ್ಷರದ ಮೊಹರು ಮಾಡಿ, ನಾನು ಮತ್ತು ಪಂಚರು ಸಹಿ ಮಾಡಿರುತ್ತೇವೆ ಹಾಗೂ ಅವುಗಳಿಗೆ 1A11 ಮತ್ತು 1A12 ಎಂದು ಗುರುತಿಸಿರುತ್ತೇನೆ. ಸದರಿ ಸ್ಥಳದಲ್ಲಿ ಜಪ್ತುಪಡಿಸಿಕೊಂಡ ರಕ್ತ ತಾಗಿದ ಎಲೆ ಹಾಗೂ ರಕ್ತ ತಾಗದೇ ಇರುವ ಎಲೆಗಳನ್ನು ಈಗಾಗಲೇ ಎಂ.ಓ–9 ಮತ್ತು 10 ಎಂದು ಗುರುತಿಸಲಾಗಿದ್ದು, ಅದಕ್ಕೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–9(ಸಿ) ಮತ್ತು ಎಂ.ಓ–10(ಸಿ) ಎಂದು ಗುರುತಿಸಲಾಯಿತು, ಅದೇ ರೀತಿ, ರಕ್ತ ಮಿಶ್ರಿತ ಮಣ್ಣು ಹಾಗೂ ರಕ್ತ ಮಿಶ್ರಿತವಲ್ಲದ ಮಣ್ಣನ್ನು ಈಗಾಗಲೇ ಎಂ.ಓ–11 ಮತ್ತು 12 ಎಂದು ಗುರುತಿಸಲಾಗಿದ್ದು, ಅದಕ್ಕೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–11(ಸಿ) ಮತ್ತು ಎಂ.ಓ–12(ಸಿ) ಎಂದು ಗುರುತಿಸಲಾಯಿತು, ಸ್ಥಳದಲ್ಲಿ ಬಿದ್ದಿದ್ದ ಊರುಗೋಲುಗಳನ್ನು

ಈಗಾಗಲೇ ಎಂ.ಓ–13 ಎಂದು ಗುರುತಿಸಲಾಗಿರುತ್ತದೆ, ಸದರಿ ಸ್ಥಳದಲ್ಲಿ ಬೆಳಿಗ್ಗೆ 8.40 ರಿಂದ 10.00 ಗಂಟೆಯವರೆಗೆ ನಿಪಿ–1 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ ಹಾಗೂ ನಿಪಿ–2 ರಂತೆ ನಕಾಶೆಯನ್ನು ತಯಾರಿಸಿರುತ್ತೇನೆ ಹಾಗೂ ನಿಪಿ–5, 6, 7, 14 ಮತ್ತು 15 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–1 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ಚಾಸಾ–1 ರವರು ಮೃತಪಟ್ಟಿರುವ ಕಾರಣ, ಅವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–1(ಈ) ಎಂದು ಗುರುತಿಸಲಾಯಿತು. ನಿಪಿ–2 ನಕಾಶೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

6. ಸದರಿ ಸ್ಥಳದಲ್ಲಿ ಹೆಚ್ಚಿನ ಜನರು ಸೇರಿದ್ದರಿಂದ, ಶವ ತನಿಖೆ ನಡೆಸಲು ಸಾಧ್ಯವಾಗಿರುವುದಿಲ್ಲ, ಅದ್ದರಿಂದ ಶವಗಳನ್ನು ಚಾಸಾ–33 ರವರ ವಾಹನದಲ್ಲಿ ಸಿಬ್ಬಂದಿಗಳಾದ ಚಾಸಾ–47, 48, 49 ರವರ ಬೆಂಗಾವಲಿನಲ್ಲಿ ಕಾರವಾರದ ಜಿಲ್ಲಾಸ್ಪತ್ರೆಗೆ ಸಾಗಿಸಿರುತ್ತೇನೆ. ಆನಂತರ ನಾನು ಮತ್ತು ಚಾಸಾ–56 ರವರು ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಅಲ್ಲಿ ಚಾಸಾ–56 ರವರಿಗೆ ಸತ್ಯನಾರಾಯಣ ಮೂರ್ತಿಯ ಶವ ತನಿಖೆಯನ್ನು ಮಾಡುವಂತೆ ಸೂಚಿಸಿರುತ್ತೇನೆ. ನಾನು ಅಶ್ವಿನಿಯ ಶವಪಂಚನಾಮೆ ಮಾಡಲು ಚಾಸಾ–5 ಮತ್ತು 6 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಅವರ ಸಮಕ್ಷಮ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ನಿಪಿ–67 ರಂತೆ ಶವ ಪಂಚನಾಮೆ ಮಾಡಿರುತ್ತೇನೆ ಹಾಗೂ ಆ ಸಮಯದಲ್ಲಿ ನಿಪಿ–57, 58, 60 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–67 ಶವ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–67(ಎ) ಮತ್ತು 67(ಬಿ) ಎಂದು ಗುರುತಿಸಲಾಯಿತು. ಪಂಚರಾದ ಚಾಸಾ–5 ರವರು ಮೃತಪಟ್ಟಿರುವ ಕಾರಣ, ಅವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–67(ಸಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ಶವವನ್ನು ಪರಿಶೀಲಿಸಿದಾಗ, ಶವದ ಕುತ್ತಿಗೆಯ ಎಡಬದಿಗೆ 16 ಸೆಂ.ಮೀ. ಉದ್ದ, X 4 ಸೆಂ.ಮೀ. ಅಗಲ, X 3 ಸೆಂ.ಮೀ. ಆಳದ ಕತ್ತರಿಸಿದ ಗಾಯ ಕಂಡುಬಂದಿದ್ದು, ದವಡೆಯ ಎಲುಬು ಕಾಣಿಸುತ್ತಿತ್ತು, ಎಡಗೈ ಮುಂಗೈ ಗಂಟಿನ ಹತ್ತಿರ ಕತ್ತರಿಸಲಾಗಿದ್ದು, ಮುಂಗೈ ನೇತಾಡುತ್ತಿದ್ದು, ಅದರ ಮೇಲೆ 3 ಸೆಂ.ಮೀ. ಅಗಲದ ಗಾಯವಾಗಿತ್ತು, ಶವ ಪಂಚನಾಮೆಯ ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ, ಫಾರ್ಮ್ ನಂ.146(i) ಮತ್ತು ಫಾರ್ಮ್ ನಂ.146(ii) ನ್ನು ಭರ್ತಿ ಮಾಡಿ, ನಮ್ಮ ಸಿಬ್ಬಂದಿಯ ಚಾಸಾ–49 ರವರ ಮೂಲಕ ವೈದ್ಯಾಧಿಕಾರಿಗಳಾದ ಚಾಸಾ–36 ರವರಿಗೆ ಕೋರಿಕೆಯನ್ನು ಕಳುಹಿಸಿಕೊಟ್ಟಿರುತ್ತೇನೆ. ಸದರಿ ಫಾರ್ಮನ್ನು ಈಗಾಗಲೇ ನಿಪಿ–68 ಎಂದು

ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-68(ಬಿ), 68(ಸಿ) ಮತ್ತು 68(ಡಿ) ಎಂದು ಗುರುತಿಸಲಾಯಿತು.

7. ಆ ಸಮಯದಲ್ಲಿ ಚಾಸಾ-56 ರವರು ಸತ್ಯನಾರಾಯಣ ಮೂರ್ತಿಯ ಶವ ಪಂಚನಾಮೆಯನ್ನು ಮುಗಿಸಿ, ಶವ ತನಿಖಾ ವರದಿಯನ್ನು ನನಗೆ ನೀಡಿರುತ್ತಾರೆ. ಆನಂತರ ನಾನು ಚಾಸಾ-56 ರವರಿಗೆ ವೇಲುವಿನ ಮನೆಗೆ ಭೇಟಿ ನೀಡಿ, ಘಟನೆಗೆ ಸಂಬಂಧಿಸಿದಂತೆ ಯಾವುದಾದರೂ ಸಾಕ್ಷಗಳು ಲಭ್ಯವಿದ್ದಲ್ಲಿ, ಅವುಗಳನ್ನು ಸಂಗ್ರಹಿಸಿ ಹಾಜರುಪಡಿಸುವಂತೆ ಸೂಚಿಸಿ ಕಳುಹಿಸಿರುತ್ತೇನೆ. ಆನಂತರ ನಾನು ಮೃತ ವೇಲುವಿನ ಶವ ಪಂಚನಾಮೆಯನ್ನು ಪ್ರಾರಂಭಿಸಿದ್ದು, ಚಾಸಾ-8 ಮತ್ತು 9 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ಅವರ ಸಮಕ್ಷಮ ಮಧ್ಯಾಹ್ನ 1.15 ರಿಂದ 2.45 ಗಂಟೆಯವರೆಗೆ ನಿಪಿ-36 ರಂತೆ ಶವ ಪಂಚನಾಮೆ ಮಾಡಿರುತ್ತೇನೆ ಹಾಗೂ ಆ ಸಮಯದಲ್ಲಿ ನಿಪಿ-37, 38, 39, 40, 41 ಮತ್ತು 59 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ-36 ಶವ ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-36(ಬಿ) ಮತ್ತು 36(ಸಿ) ಎಂದು ಗುರುತಿಸಲಾಯಿತು. ಪಂಚರಾದ ಚಾಸಾ-9 ರವರು ಮೃತಪಟ್ಟಿರುವ ಕಾರಣ, ಅವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-36(ಡಿ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಕಾಲಕ್ಕೆ ಶವವನ್ನು ಪರಿಶೀಲಿಸಿದಾಗ, ಕುತ್ತಿಗೆಯ ಎಡಭಾಗದಿಂದ ಗದ್ದದ ವರೆಗೆ 27 ಸೆಂ.ಮೀ. ಉದ್ದ, X 5 ಸೆಂ.ಮೀ. ಅಗಲವಿದ್ದು, ಸದರಿ ಗಾಯವು ಕುತ್ತಿಗೆಯ ಬಳಿ 3 ಸೆಂ.ಮೀ. ಆಳ, ಮತ್ತು ಗದ್ದದ ಬಳಿ 5 ಸೆಂ.ಮೀ. ಆಳವಿರುತ್ತದೆ, ಎಡಗೆನ್ನೆಯಿಂದ ಎಡ ಕಿವಿಯ ಮೇಲಾಗಿ ಹಿಂಬದಿಯವರೆಗೆ 9 ಸೆಂ.ಮೀ. ಉದ್ದ, X ½ ಸೆಂ.ಮೀ. ಅಗಲ, X 2 ಸೆಂ.ಮೀ. ಆಳದ ಕತ್ತರಿಸಿದ ಗಾಯ, ಹಣೆಯ ಮೇಲ್ಭಾಗದಲ್ಲಿ ತಲೆಗೆ 8 ಸೆಂ.ಮೀ. ಉದ್ದ, X 1 ಸೆಂ.ಮೀ. ಅಗಲ, X 1 ಸೆಂ.ಮೀ. ಆಳದ ಕತ್ತರಿಸಿದ ಗಾಯ, ಬಲ ಕಿವಿಯಿಂದ ಕುತ್ತಿಗೆಯ ಹಿಂಭಾಗದ ವರೆಗೆ 13 ಸೆಂ.ಮೀ. ಉದ್ದ, X 1 ಸೆಂ.ಮೀ. ಅಗಲ, X 5 ಸೆಂ.ಮೀ. ಆಳದ ಕತ್ತರಿಸಿದ ಗಾಯ, ಎಡಗೈ ಹೆಬ್ಬೆರಳಿನಿಂದ ಮಧ್ಯದ ಬೆರಳಿನ ವರೆಗೆ 8 ಸೆಂ.ಮೀ. ಉದ್ದ, X 1 ಸೆಂ.ಮೀ. ಅಗಲ, X 1 ಸೆಂ.ಮೀ. ಆಳದ ಕತ್ತರಿಸಿದ ಗಾಯ ಕಂಡುಬಂದಿರುತ್ತದೆ ಹಾಗೂ ಆತನ ಮೈಮೇಲೆ ಬಟ್ಟೆಗಳು ಇರುತ್ತವೆ. ಶವ ಪಂಚನಾಮೆಯ ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ, ಫಾರ್ಮ್ ನಂ.146(i) ಮತ್ತು ಫಾರ್ಮ್ ನಂ.146(ii) ನ್ನು ಭರ್ತಿ ಮಾಡಿ, ನಮ್ಮ ಸಿಬ್ಬಂದಿಯಾದ ಚಾಸಾ-48 ರವರ ಮೂಲಕ ವೈದ್ಯಾಧಿಕಾರಿಗಳಾದ ಚಾಸಾ-35 ರವರಿಗೆ ಕೋರಿಕೆಯನ್ನು ಕಳುಹಿಸಿಕೊಟ್ಟಿರುತ್ತೇನೆ. ಸದರಿ ಫಾರ್ಮನ್ನು ಈಗಾಗಲೇ

ನಿಪಿ–63 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–63(ಬಿ), 63(ಸಿ) ಮತ್ತು 63(ಡಿ) ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.